ಶ್ರಿ ಕೆ.ಎಸ್.ಈಶ್ವರಪ್ಪ:–ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಚಂದ್ರರವರು ಹೇಳುತ್ತಿರುವುದು ಸರಿಯಾಗಿದೆ. ಮೊನ್ನೆದಿವಸ ಈ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡ ಆಗಿದೆ. ಆ ಜಮೀನಿನ ಸ್ಥಳದ ಬಗ್ಗೆ ತನಿಖೆ ಮಾಡಿ ಇನ್ನು ಒಂದು ತಿಂಗಳಲ್ಲಿ ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಡುತ್ತೇವೆ.

ಅಧ್ಯಕ್ಷರು:– ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು ಇಲ್ಲ. ಮತ್ತೆ ಡಾ: ಸಾರ್ವಭೌಮ ಬಗಲಿಯವರು ಸಹ ಇಲ್ಲ. ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ. ಆದ್ದರಿಂದ, ನಾಳೆ ತೆಗೆದುಕೊಳ್ಳುತ್ತೇನೆ.

4. ವಿಷಯ:– ಸಿಂಧನೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಐ.ಹೆಚ್.ಎಸ್.ಡಿ.ಪಿ. ಯೋಜನೆಯಡಿ ನಿರ್ಮಾಣ ಮಾಡುತ್ತಿರುವ ಮನೆಗಳ ಕಾಮಗಾರಿಯು ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ(ಸಿಂಧನೂರು):– ಮಾನ್ಯ ಅಧ್ಯಕ್ಷರೆ, ಸಿಂಧನೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಐ.ಹೆಚ್.ಎಸ್.ಡಿ.ಸಿ. ಯೋಜನೆಯಡಿ ನಿರ್ಮಾಣ ಮಾಡುತ್ತಿರುವ ಮನೆಗಳ ಕಾಮಗಾರಿಯು ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ವಸತಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ. ವಿ. ಸೋಮಣ್ಣ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ನರ್ಮ್‌ನ IHSDPಯೋಜನೆಯಡಿಯಲ್ಲಿ ಸಿಂಧನೂರು ನಗರದ 7 ಕೊಳಚೆ ಪ್ರದೇಶಗಳಲ್ಲಿ 105 ಮನೆಗಳ ನಿರ್ಮಾಣವನ್ನು ಮೂಲಭೂತ ಸೌಲಭ್ಯಗಳೊಂದಿಗೆ ರೂ. 19.66 ಕೋಟಿಗಳ ವೆಚ್ಚದಲ್ಲಿ 2008–09, 2009–10ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಜನವರಿ 2013ರ ಅಂತ್ಯದೊಳಗೆ 1005 ಮನೆಗಳ ಪೈಕಿ 910 ಮನೆಗಳನ್ನು ಪೂರ್ಣಗೊಳಿಸಿದ್ದು, ಉಳಿದ ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಸದರಿ ಮನೆಗಳ ನಿರ್ಮಾಣವನ್ನು ಹಾಲಿ ಇರುವ ಕೊಳಚೆ ಪ್ರದೇಶದಲ್ಲಿ ಗುಡಿಸಲುಗಳನ್ನು ಹಂತ ಹಂತವಾಗಿ ತೆರವುಗೊಳಿಸಿ ಮನೆಗಳ ನಿರ್ಮಾಣ ಕೈಗೊಳ್ಳಲು, ಫಲಾನುಭವಿಗಳು ಜೀವನೋಪಾಯಕ್ಕಾಗಿ ಬೇರೆ ಸ್ಥಳಗಳಿಗೆ ಹೋಗಿದ್ದು ಅವರು ಬಂದ ನಂತರ ಗುತ್ತಿಗೆದಾರರಿಗೆ ನಿವೇಶನವನ್ನು ನೀಡಿದ್ದರಿಂದ, 2010 ರಲ್ಲಿ ಭಾರಿ ಪ್ರವಾಹದಿಂದ ಸರಕು ಸಾಗಣಿ ಹಾಗೂ ಮರಳು ಸಾಗಣಿ ನೀತಿ ಕಾರಣದಿಂದ ಹಾಗೂ ಫಲಾನುಭವಿಗಳ ವಂತಿಗೆ ನೀಡಲು ತಡವಾಗಿರುವ ಕಾರಣ ಮನೆಗಳ ನಿರ್ಮಾಣದಲ್ಲಿ ವಿಳಂಬವಾಗಿರುತ್ತದೆ. ಕೊಳಚೆ ಪ್ರದೇಶವಾರು ಮನೆಗಳ ನಿರ್ಮಾಣದ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ.

ಕೊಳಚೆ ಪ್ರದೇಶದ ಹೆಸರು	ಮನೆಗಳ ಸಂಖ್ಯೆ	ಪೂರ್ಣಗೊಂಡ ಮನೆಗಳ ಸಂಖ್ಯೆ	ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ
ಏ.ಕೆ.ಗೋಪಾಲನಗರ	250	250	–
ಇಂದಿರಾನಗರ	150	150	–
ಮುನಿಸಿಪ್ ಕ್ಯಾಂಪ್	120	120	–
ಗಂಗಾನಗರ	160	160	–
ಲಕ್ಷ್ಮೀನಾರಾಯಣ ಕ್ಯಾಂಪ್	105	105	–
ಲಕ್ಷ್ಮೀ ಕ್ಯಾಂಪ್	105	85	20
3ನೇ ಮೈಲ್ ಕ್ಯಾಂಪ್	115	40	75

ಸಿಂಧನೂರು ನಗರದಲ್ಲಿ ಒಟ್ಟು 1005 ಮನೆಗಳ ಪೈಕಿ 910 ಮನೆಗಳು ಪೂರ್ಣಗೊಂಡಿದ್ದು, ಉಳಿದ 95 ಮನೆಗಳನ್ನು ಏಪ್ರಿಲ್ 2013 ರೊಳಗೆ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು.

ಶ್ರೀ ವೆಂಕಟರಾವ್ ನಾಡಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರು ಉತ್ತರವನ್ನು ಓದಗಿಸಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ, ಇಲ್ಲಿ ಕಾಮಗಾರಿಯನ್ನು ಮೂರ್ನಾಲ್ಕು ಗುತ್ತಿಗೆದಾರರಿಗೆ ಕೊಟ್ಟಿದ್ದಾರೆ. ಇದೊಂದು ಪ್ಯಾಕೇಜ್ ಆಗಿದೆ. ಅಂದರೆ, ಕೊಳೆಗೇರಿಯಲ್ಲಿ ಮನೆಗಳನ್ನು ಕಟ್ಟಿಸಿ ಅಲ್ಲಿ ಕುಡಿಯುವ ನೀರಿನ

ವ್ಯವಸ್ಥೆ ಹಾಗೂ ವಿದ್ಯುತ್ ಸಂಪರ್ಕದ ವ್ಯವಸ್ಥೆ ಮತ್ತು ರಸ್ತೆಗಳ ಅಭಿವೃದ್ಧಿಯನ್ನು ಸಹ ಮಾಡಬೇಕು. ಈ ಎಲ್ಲ ವಿಷಯಗಳು ಸಂಪೂರ್ಣವಾಗಿ ಮಾನ್ಯ ಸೋಮಣ್ಣನವರು ಗಮನದಲ್ಲಿದೆ. ಮಾನ್ಯ ಸಚಿವರು ನನ್ನನ್ನು ಸಹ ಕರೆದು ಅಧಿಕಾರಿಗಳಿಗೆ ಎರಡು-ಮೂರು ಸಲ ಹೇಳಿದ್ದಾರೆ. ಆದರೆ, ಅಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ, ಒಬ್ಬ ಗುತ್ತಿಗೆದಾರ ವಿಳಂಬ ಮಾಡುತ್ತಿದ್ದಾನೆ. ಉಳಿದೆಲ್ಲ ಗುತ್ತಿಗೆದಾರರಿಗೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲು ವಹಿಸಲಾಗಿತ್ತೋ ಅಷ್ಟು ಮನೆಗಳನ್ನು ಕಟ್ಟಿದ್ದಾರೆ. ಹಾಗೆಯೇ ಎಲ್ಲೆಲ್ಲಿ ಸಿ.ಸಿ.ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲ ಮಾಡಿದ್ದಾರೆ. ಒಬ್ಬ ಗುತ್ತಿಗೆದಾರನಿಂದ ಅಲ್ಲಿ ವಿಳಂಬವಾಗುತ್ತಿದೆ. ಮತ್ತೆ ಅಲ್ಲಿ ರಸ್ತೆಗಳನ್ನು ಅಗೆದು ಕೆಡಿಸಿದ್ದಾರೆ. ಈ ಬಗ್ಗೆ ಮಾನ್ಯ ಸೋಮಣ್ಣನವರ ಜೊತೆ ಚರ್ಚೆ ಮಾಡಿದ್ದೇನೆ. ಅವರು ಅಧಿಕಾರಿಗಳನ್ನು ಕರೆದು ಇದನ್ನು ಬೇಗ ಮಾಡಬೇಕೆಂದು ಹೇಳಿದ್ದರೂ ಕೂಡ ಇದುವರೆಗೂ ಅಧಿಕಾರಿಗಳು ಬಂದು ಅದನ್ನು ನೋಡುತ್ತಿಲ್ಲ. ರಸ್ತೆಗಳಲ್ಲಿ underground drainage ಮಾಡಿದ್ದು, ಇದಕ್ಕಾಗಿ ರಸ್ತೆಗಳನ್ನು ಅಗೆದು ಹಾಗೆಯೇ ಬಿಟ್ಟಿರುವುದರಿಂದ ಮನೆಗಳಿಗೂ ಸಹ ಹೋಗುವುದಕ್ಕೆ ಆಗುತ್ತಿಲ್ಲ. ಮೂರ್ನಾಲ್ಕು ವಾರ್ಡ್‌ಗಳಲ್ಲಿ ಈ ರೀತಿಯಾದ ಸಮಸ್ಯೆಗಳು ಬಹಳವಾಗಿವೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಲ್ಲಿ ಕಟ್ಟಬೇಕಾಗಿರುವ ಒಂದೆರೆಡು

ಮನೆಗಳನ್ನು ಯಾವಾಗಲಾದರೂ ಕಟ್ಟಲಿ. ಆದರೆ, ಅಲ್ಲಿ ಅಗೆದಿರುವ ರಸ್ತೆಯನ್ನು ರಿಪೇರಿ ಮಾಡಿಸಿ. ಏಕೆಂದರೆ, ಅಲ್ಲಿಂದ ಬೇರೆ ಕಡೆಗೆ ಹೋಗುವವರೆಗೆಲ್ಲ ಅದರಿಂದ ತೊಂದರೆಯಾಗಿದೆ. ಆದ್ದರಿಂದ, ಆ ರಸ್ತೆಯನ್ನು ಕೂಡಲೇ ರಿಪೇರಿ ಮಾಡಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ವೆಂಕಟರಾವ್ ನಾಡಗೌಡರು ಇಲ್ಲಿ ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ಸುಮಾರು ಸಾರಿ ಚರ್ಚೆ ಮಾಡಿದ್ದೇವೆ. ಅಲ್ಲಿ 1005 ಮನೆಗಳಲ್ಲಿ ಇನ್ನು ಕೇವಲ 95 ಮನೆಗಳು ಮಾತ್ರ ಉಳಿದುಕೊಂಡಿವೆ. ಈ ಬಗ್ಗೆ ನಾನು ಮತ್ತು ಅವರು ಸ್ವತಃ ಕುಳಿತು ಚರ್ಚೆ ಮಾಡಿದೇವೆ. ಅಲ್ಲಿನ ಮೂಲಭೂತ ಸೌಕರ್ಯಗಳಿಗೆ IHSDP ಮತ್ತು BSUP ಯಲ್ಲಿ ಕೇಂದ್ರಸರ್ಕಾರ ಯಾವುದೇ ಕಾರಣಕ್ಕೂ ಕೂಡ ಹಣವನ್ನು ಕೊಡತಕ್ಕಂಥ ಪದ್ಧತಿಯನ್ನು ಇಟ್ಟುಕೊಂಡಿರಲಿಲ್ಲ. ಇದಾದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜೊತೆ ಮಾತನಾಡಿ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಮನೆಗಳನ್ನು ಕಟ್ಟುತ್ತಿದ್ದೆವೋ ಅಲ್ಲಿಗೆ ನಮ್ಮ ಸರ್ಕಾರದಿಂದ 41 ಕೋಟಿ ರೂಪಾಯಿಗಳು ಬಿಡುಗಡೆಯಾದ ಮೇಲೆ ಕೆಲವು ಕಡೆ ಕೆಲಸ ಆಗಿದೆ. ಈ ಸಂದರ್ಭದಲ್ಲಿ ಸನ್ಮಾನ್ಯ ನಾಡಗೌಡರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಉಳಿದಿರುವ 95 ಮನೆಗಳನ್ನು ಕಟ್ಟಬೇಕಾಗಿರುವ ಗುತ್ತಿಗೆದಾರ ಕೈಗೆ ಸಿಗುತ್ತಿರಲಿಲ್ಲ. ಮೊನ್ನೆದಿವಸ

ಆತನನ್ನು ಹಿಡಿಸಿ ಕರೆಸಲಾಗಿದೆ. ದರ ಕಡಿಮೆ ಎಂಬ ದೃಷ್ಟಿಯಿಂದ ಆತ ಒದ್ದಾಡುತ್ತಿದ್ದ. ಉಳಿದಿರುವ 95 ಮನೆಗಳನ್ನು ಮುಗಿಸುತ್ತೇವೆ. ಈಗಾಗಲೇ ಎಲ್ಲ ಕಡೆ sanitation ಕೆಲಸವನ್ನು ಮುಗಿಸಿದ್ದೇವೆ. ಅಲ್ಲಿನ ರಸ್ತೆಗಳಲ್ಲಿ ಸಾರ್ವಜನಿಕರು ಓಡಾಡುವುದಕ್ಕೆ ಸರಿ ಮಾಡುತ್ತೇವೆ. ಹಾಗೆಯೇ, ಕುಡಿಯುವ ನೀರು ವಿದ್ಯುಚ್ಛಕ್ತಿಗೆಲ್ಲ ಆಧ್ಯತೆಯನ್ನು ಕೊಟ್ಟಿದ್ದೇವೆ. ಇನ್ನು ಎರಡು–ಮೂರು ದಿವಸಗಳಲ್ಲಿ ತಮ್ಮ ಜೊತೆಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ. ಅಲ್ಲಿ ಏನು ಸಮಸ್ಯೆಗಳಿವೆ ಅದನ್ನು ಇನ್ನು 15–20 ದಿವಸಗಳಲ್ಲಿ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಎಲ್ಲ ಕಡೆ ಗುತ್ತಿಗೆದಾರರದು ಇದೇ ರೀತಿಯ ಸಮಸ್ಯೆ ಮಾಡಿದ್ದಾರೆ. ನಮ್ಮಲ್ಲಿಯೂ ಕೂಡ 60 ಮನೆಗಳು ನಿಂತು ಹೋಗಿದ್ದು, ಇದರ ಗುತ್ತಿಗೆದಾರ ಕೂಡ ಪತ್ತೆ ಇಲ್ಲ. ಆದ್ದರಿಂದ, ನಾನು ಹೇಳುವುದೇನೆಂದರೆ, ಇಂಥ ಕಡೆ ಬೇರೆ ಗುತ್ತಿಗೆದಾರರಿಗೆ ವಹಿಸಿ ಆ ಕೆಲಸವನ್ನು ಪೂರ್ಣಗೊಳಿಸುವಂಥದನ್ನು ಮಾಡಬೇಕಾಗುತ್ತದೆ. ಶಿರಾದಲ್ಲಿ ಕೂಡ ಇದೇ ರೀತಿಯ ಪ್ರಶ್ನೆ ಆಗಿದೆ. IHSDP ಯೋಜನೆಗಳು ಎಲ್ಲ ಕಡೆ stop ಆಗಿರುವುದು ಮತ್ತು ಅರೆಬರೆ ಆಗಿರುವಂಥದಕ್ಕೆ ಗುತ್ತಿಗೆದಾರರು ಕಾರಣರಾಗಿದ್ದಾರೆ.

ಶ್ರೀ ವಿ.ಸೋಮಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಹಿರಿಯ ಸದಸ್ಯರಾಗಿದ್ದಾರೆ. ಅದರ ಬಗ್ಗೆ ಎಷ್ಟು ಬೆಳಕು ಚೆಲ್ಲಿದ್ದೇವೆಂಬುದು ತಮಗೂ ಸಹ ಗೊತ್ತಿದೆ. ಯಾವುದೇ ಯೋಜನೆಗಳು ಸುಮಾರು ವರ್ಷಗಳವರೆಗೆ ನಿಂತರೆ ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆಂದು ಅರಿತುಕೊಂಡು 41 ಕೋಟಿ ರೂಪಾಯಿಯನ್ನು ನಮ್ಮ ಸರ್ಕಾರದಿಂದ ಬಿಡುಗಡೆ ಮಾಡಿದ್ದೇವೆ. ಪ್ರಾಯಶಃ ಮಾನ್ಯ ನಾಡಗೌಡರು ಇರಬಹುದು ಅಥವಾ ಇಡೀ ರಾಜ್ಯದಲ್ಲಿ ಈ ರೀತಿಯಾಗಿ ಎಲ್ಲೆಲ್ಲಿ ಆಗಿದೆಯೋ ಆ ಬಗ್ಗೆ ಆಯವ್ಯಯದ ಮೇಲೆ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ತಮ್ಮೆಲ್ಲರನ್ನು ಕರೆಯುತ್ತೇನೆ. ಈ ಬಗ್ಗೆ ಒಂದು ದಿನ ಎಲ್ಲರು ಕುಳಿತುಕೊಂಡು ಚರ್ಚೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಈ ಎಲ್ಲವನ್ನು ಪೂರ್ಣಗೊಳಿಸುವಂಥ ಕೆಲಸವನ್ನು ತಕ್ಷಣವೇ ಮಾಡುವುದಕ್ಕೆ ಸೂಚನೆಯನ್ನು ಕೊಡುತ್ತೇನೆ.

5. ವಿಷಯ:– ತೀರ್ಥಹಳ್ಳಿ ತಾಲ್ಲೂಕು ಬಗರ್ ಹುಕುಂ ಸಮಿತಿ ಪ್ರತ್ಯೇಕವಾಗಿ ಮಂಜೂರು ಮಾಡಿರುವ ಅರ್ಜಿಗಳ ಬಗ್ಗೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಮಿತಿ ಪ್ರತ್ಯೇಕವಾಗಿ ಮಂಜೂರು ಮಾಡಿರುವ ಅರ್ಜಿಗಳ ಬಗ್ಗೆ ಮಾನ್ಯ ಕಂದಾಯ